# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : 2015-16ನೇ ಸಾಲಿನಲ್ಲಿ ಕೆರೆಗಳ ಪುನರ್ ಸ್ಥಿತಿ ಹಾಗೂ ಪುನಶ್ಚೇತನ ಯೋಜನೆಯಡಿ ಜಿ.ಪಂ. ಕೆರೆಗಳಿಗಾಗಿ ಲೆಕ್ಕಶೀರ್ಷಿಕೆ-2702-01-101-0-73-059 ರಡಿ ಸೀಮಿತ ತಾಲ್ಲೂಕುಗಳಲ್ಲಿ ಕಾರ್ಯಕ್ರಮ ಅನುಷ್ಠಾನಗೊಳಿಸಲು ಜಿಲ್ಲಾ ಪಂಚಾಯತಿಗಳಿಗೆ ಅನುದಾನ ಹಂಚಿಕೆ ಮಾಡುವ ಕುರಿತು.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:45:ಆರ್‌ಆರ್‌ಸಿ:2015. ದಿನಾಂಕ:22-4-2015.
2. ಮಾನ್ಯ ಗ್ರಾ.ಅ ಮತ್ತು ಪಂ.ರಾಜ್ ಸಚಿವರ ಕಂಡಿಕೆ ಟಿಪ್ಪಣಿ ಆದೇಶ ದಿನಾಂಕ:8-9-2015.
3. ರದ್ದುಪಡಿಸಿದ ಆದೇಶ ಸಂಖ್ಯೆ: ಗ್ರಾಅಪ:45/1:ಆರ್‌ಆರ್‌ಸಿ: 2015. ದಿನಾಂಕ:15-9-2015.

**ಪ್ರಸ್ತಾವನೆ:**

ಕೆರೆಗಳ ಪುನರ್ ಸ್ಥಿತಿ ಹಾಗೂ ಪುನಶ್ಚೇತನ ಯೋಜನೆಯಡಿ ಜಿ.ಪಂ. ಕೆರೆಗಳಿಗಾಗಿ ಲೆಕ್ಕಶೀರ್ಷಿಕೆ-2702-01-101-0-73-133/135/136/186/187/188ರಡಿ ಜಿಲ್ಲಾ ಪಂಚಾಯತಿಗಳಿಗೆ ವಿಶೇಷ ಅಭಿವೃದ್ಧಿ ಯೋಜನೆಯಂತೆ ರೂ.17.00ಕೋಟಿಗಳನ್ನು ಅತಿ ಹೆಚ್ಚು ಹಿಂದುಳಿದ, ಅತಿ ಹಿಂದುಳಿದ ಹಾಗೂ ಹಿಂದುಳಿದ ತಾಲ್ಲೂಕುವಾರು ಅನುದಾನ ಹಂಚಿಕೆ ಮಾಡಿ ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:45:ಆರ್‌ಆರ್‌ಸಿ:2015, ದಿನಾಂಕ:22-4-2015ನ್ನು ಮೇಲೆ ಓದಲಾದ-1ರಲ್ಲಿ ಪ್ರಸಕ್ತ 2015-16ನೇ ಸಾಲಿಗೆ ಹೊರಡಿಸಲಾಗಿರುತ್ತದೆ.

ಈ ರೀತಿ ಮೇಲೆ ಓದಲಾದ-1ರ ಆದೇಶದಲ್ಲಿ ಜಿಲ್ಲಾ ಪಂಚಾಯತಿಗಳಿಗೆ ವಿಶೇಷ ಅಭಿವೃದ್ಧಿ ಯೋಜನೆಯಂತೆ ಅತಿ ಹೆಚ್ಚು ಹಿಂದುಳಿದ, ಅತಿ ಹಿಂದುಳಿದ ಹಾಗೂ ಹಿಂದುಳಿದ ತಾಲ್ಲೂಕುವಾರು ರೂ.17.00ಕೋಟಿ ಅನುದಾನ ಹಂಚಿಕೆಯಲ್ಲಿ ಕೆಲವು ತಾಲ್ಲೂಕುಗಳಿಗೆ ಅನುದಾನವು ತೀರಾ ಕಡಿಮೆಯಾಗಿದ್ದು, ಇದರಿಂದ ಅನುದಾನ ಸಮರ್ಪಕ ಹಾಗೂ ಪರಿಣಾಮಕಾರಿಯಾಗಿ ಮಾಡಲಾಗದ ಕಾರಣ, ಈ ಅನುದಾನವನ್ನು ಸದ್ಬಳಕೆ ಮಾಡಲು ಲಭ್ಯ ಅನುದಾನವನ್ನು ಸೀಮಿತ ತಾಲ್ಲೂಕುಗಳಿಗೆ ಹಂಚಿಕೆ ಮಾಡಿ ವಿನಿಯೋಗಿಸಲು ಅನುವಾಗುವಂತೆ ಈಗಾಗಲೇ ಅನುದಾನ ಹಂಚಿಕೆ ಮಾಡಿ ಹೊರಡಿಸಿದ ಆದೇಶವನ್ನು ಮೇಲೆ ಓದಲಾದ-3ರಲ್ಲಿರುವಂತೆ ರದ್ದುಪಡಿಸಲಾಗಿರುತ್ತದೆ.

ಪ್ರಸಕ್ತ 2015-16ನೇ ಸಾಲಿಗೆ ಕೆರೆಗಳ ಪುನರ್ ಸ್ಥಿತಿ ಹಾಗೂ ಪುನಶ್ಚೇತನ ಯೋಜನೆಯಡಿ ಜಿ.ಪಂ. ಕೆರೆಗಳಿಗಾಗಿ ಲೆಕ್ಕಶೀರ್ಷಿಕೆ-2702-01-101-0-73-059 ರಡಿ ಲಭ್ಯವಿರುವ ರೂ.17.00ಕೋಟಿಗಳನ್ನು ಕೆಲವು ಜಿಲ್ಲೆಗಳ ತಾಲ್ಲೂಕುಗಳಿಗೆ ಸೀಮಿತಗೊಳಿಸಿ ಕೆರೆಗಳ ಪುನಶ್ಚೇತನ ಮತ್ತು ಅಭಿವೃದ್ಧಿಗಾಗಿ ಮರು ಹಂಚಿಕೆ ಮಾಡಲು ಸರ್ಕಾರವು ತೀರ್ಮಾನಿಸಿದೆ.

ಆದ್ದರಿಂದ ಈ ಆದೇಶ

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:45/2:ಆರ್‌ಆರ್‌ಸಿ:2015, ಬೆಂಗಳೂರು, ದಿನಾಂಕ:15-9-2015.**

ಸರ್ಕಾರವು 2015-16ನೇ ಸಾಲಿಗಾಗಿ ರಾಜ್ಯ ವಲಯದಡಿ ಲೆ.ಶೀ.2702 ಜಿಲ್ಲಾ ಪಂಚಾಯತಿಯ ಸಣ್ಣ ನೀರಾವರಿ ಕೆರೆಗಳ ಪುನರ್‌ಸ್ಥಿತಿ ಹಾಗೂ ಪುನಶ್ಚೇತನ-ಗ್ರಾಮ ಪಂಚಾಯತಿಗಳಿಗೆ ರಾಜ್ಯಸ್ವ ಬಿಡುಗಡೆಯಡಿ ಲೆಕ್ಕಶೀರ್ಷಿಕೆ-2702-01-101-0-73-059 ರಡಿ ಒಟ್ಟು ರೂ.17.00ಕೋಟಿಗಳನ್ನು ಕೆಳಕಂಡ ಜಿಲ್ಲೆಗಳ ತಾಲ್ಲೂಕುಗಳಿಗೆ ಸೀಮಿತಗೊಳಿಸಿ

ಕೆರೆಗಳ ಪುನಶ್ಚೇತನ ಮತ್ತು ಅಭಿವೃದ್ಧಿಗಾಗಿ ಮರು ಹಂಚಿಕೆ ಮಾಡಲು ಸರ್ಕಾರವು ಹರ್ಷಿಸುತ್ತದೆ.

| ಕ್ರ ಸಂ | ಜಿಲ್ಲೆ | ತಾಲ್ಲೂಕು | ಹಂಚಿಕೆ ಮಾಡಿದ ಅನುದಾನ (ರೂ.ಕೋಟಿಗಳಲ್ಲಿ) |
|---|---|---|---|
| 1 | ಗುಲ್ಬರ್ಗ | ಚಿಂಚೋಳಿ | 1.50 |
| 2 | ಬೀದರ್ | ಬಾಲ್ಕಿ | 1.50 |
| 3 | ಚಿಕ್ಕಬಳ್ಳಾಪುರ | ಬಾಗೇಪಲ್ಲಿ | 1.50 |
| 4 | ಗದಗ | ಗದಗ ಜಿಲ್ಲೆ | 7.00 |
| 5 | ತುಮಕೂರು | ಮಧುಗಿರಿ | 1.50 |
| 6 | ಚಿತ್ರದುರ್ಗ | ಹೊಸದುರ್ಗ | 1.50 |
| 7 | ಹಾವೇರಿ | ಹಾವೇರಿ | 1.50 |
| 8 | ಹಾವೇರಿ | ರಾಣಿಬೆನ್ನೂರು | 1.00 |
| | ಒಟ್ಟು | | 17.00 |

ಜಿ.ಪಂ.ಗಳಿಗೆ ನೀಡಿರುವ ಅನುದಾನ ಹಂಚಿಕೆಯು ಕೆಳಕಂಡ ಷರತ್ತುಗಳಿಗೆ ಒಳಪಟ್ಟಿದೆ.

**ಷರತ್ತುಗಳು:**

1. ಈ ಆದೇಶದಂತೆ ಹಂಚಿಕೆ ಮಾಡಿರುವ ಅನುದಾನವು ನಿಗಧಿಪಡಿಸಿದ ತಾಲ್ಲೂಕಿಗೆ ಸೀಮಿತವಾಗಿದ್ದು, ಅತೀ ಹೆಚ್ಚು ಆದ್ಯತೆ ಇರುವ ಕೆರೆಗಳನ್ನು ಮಾತ್ರ ಆಯ್ಕೆ ಮಾಡಿಕೊಂಡು, ಆಯ್ದ ಕೆರೆಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ಕೆಳಕಂಡ ಅಂಶಗಳನ್ನು ಗಮನದಲ್ಲಿರಿಸಿಕೊಳ್ಳತಕ್ಕದ್ದು.

(i) ಜಿಲ್ಲಾ ಪಂಚಾಯತಿ ವ್ಯಾಪ್ತಿಯಲ್ಲಿರುವ ಕೆರೆಗಳ ಆಯಕಟ್ಟು 40 ಹೆಕ್ಟೇರ್‌ಗಿಂತ ಕಡಿಮೆ ಇದ್ದು, ಅದರಲ್ಲಿ ಅತಿ ಹೆಚ್ಚು ಆಯಕಟ್ಟು ಇರುವ ಕೆರೆಗಳಿಗೆ ಪ್ರಥಮ ಆದ್ಯತೆ ನೀಡಬೇಕು. ಆಯ್ದ ಕೆರೆಯ ಆಯಕಟ್ಟು ಕನಿಷ್ಟ 20 ಹೆಕ್ಟೇರ್ ಇರಬೇಕು.

(ii) ಕೆರೆಗಳ ಆಯ್ಕೆಯನ್ನು ಮಾಡುವಾಗ ಆ ತಾಲ್ಲೂಕಿನಲ್ಲಿ Drinking Water Quality affected habitations ನ ಪ್ರದೇಶದಲ್ಲಿರುವ ಕರೆಗಳಿಗೆ ಆದ್ಯತೆ ನೀಡಬೇಕು.

(iii) ಕೆರೆಯ ಕ್ಷೇತ್ರದಲ್ಲಿ ಎಲ್ಲಿಯೂ ಒತ್ತುವರಿಯಾಗಬಾರದು.

(iv) ಕೆರೆಗಳ ಆಯ್ಕೆಯನ್ನು ಜಲಾನಯನ ಪ್ರದೇಶವನ್ನು ಆಧರಿಸಿ ಮಾಡಬೇಕು. ಕೆರೆಗೆ ಹರಿದು ಬರುವ ನಾಲೆಯ ಅಥವಾ ಹಳ್ಳದ ಮೇಲಿನ ಮಟ್ಟದಲ್ಲಿರುವ ಕೆರೆಗಳಿಗೆ ಆಧ್ಯತೆ ನೀಡುವುದು.

(v) ಈ ಅನುದಾನವನ್ನು ಸಾಮರ್ಥ್ಯವುಳ್ಳ ಕೆರೆಗಳಿಗೆ ಸಂಪೂರ್ಣ ಜೀರ್ಣೋದ್ಧಾರಕ್ಕೆ ವಿನಿಯೋಗಿಸತಕ್ಕದ್ದು.

2. ಮುಖ್ಯ ಇಂಜನಿಯರ್, ಪಂ.ರಾ.ಇಂ. ಇಲಾಖೆಯವರು ಎಲ್ಲಾ ಅನುಮೋದಿತ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅನುಷ್ಠಾನದ ಜವಾಬ್ದಾರಿಯನ್ನು ನಿರ್ವಹಿಸುವುದು ಹಾಗೂ ಕಾರ್ಯಪಾಲಕ ಅಭಿಯಂತರರಿಂದ ಪ್ರಗತಿ ವರದಿಯನ್ನು ಪಡೆದು ಕಾಲಕಾಲಕ್ಕೆ ನೀಡತಕ್ಕದ್ದು.

3. ಆಯ್ಕೆಯಾದ ಕೆರೆಗಳನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಲು ತಯಾರಿಸಲಾದ ಕ್ರಿಯಾ ಯೋಜನೆಯನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ ರವರಿಂದ ಆಡಳಿತಾತ್ಮಕವಾಗಿ ಅನುಮೋದನೆ ಪಡೆದು ಅನುಷ್ಠಾನಗೊಳಿಸತಕ್ಕದ್ದು.

4. ಕ್ರಿಯಾ ಯೋಜನೆಯಂತೆ ಕೈಗೊಳ್ಳುವ ಕೆರೆ ಕಾಮಗಾರಿಗಳ ಅಂದಾಜನ್ನು ನಿಯಮಾನುಸಾರ ತಾಂತ್ರಿಕ ಪರಿಶೀಲನೆಗೊಳಪಡಿಸಿ ಸೂಕ್ತ ಪ್ರಾಧಿಕಾರದಿಂದ ಅನುಮೋದನೆ ಪಡೆಯತಕ್ಕದ್ದು.

5. ಅನುಮೋದಿತ ಕಾಮಗಾರಿಯನ್ನು ಪ್ರಸ್ತುತ 2015-16ನೇ ಸಾಲಿನಲ್ಲಿಯೇ ಪೂರ್ಣಗೊಳಿಸತಕ್ಕದ್ದು ಹಾಗೂ ಯಾವುದೇ ಕಾರಣಕ್ಕೂ ಮುಂದಿನ ವರ್ಷಕ್ಕೆ ಮುಂದುವರೆದ ಕಾಮಗಾರಿಗಳೆಂದು (Spill over) ಮುಂದುವರೆಸತಕ್ಕದ್ದಲ್ಲ.
6. ಆಯ್ಕೆಯಾದ ಕೆರೆಗೆ ಎಲ್ಲಾ ಅಭಿವೃದ್ಧಿಗಳನ್ನೊಳಗೊಂಡಂತೆ ಒಂದೇ ಸಮಗ್ರವಾದ ಅಂದಾಜನ್ನು ತಯಾರಿಸಿ ಕಾಮಗಾರಿ ಅನುಷ್ಠಾನಗೊಳಿಸತಕ್ಕದ್ದು.
7. ಅನುಮೋದಿಸಲ್ಪಟ್ಟ ಕೆರೆ ಕಾಮಗಾರಿ ಕ್ರಿಯಾ ಯೋಜನೆಯನ್ನು ಗ್ರಾ.ಅ ಮತ್ತು ಪಂ.ರಾಜ್ ಇಲಾಖೆಯ www.kar.nic.in/rdpr ವೆಬ್‌ಸೈಟ್‌ನಲ್ಲಿ ಅಳವಡಿಸುವುದು ಕಡ್ಡಾಯವಾಗಿರುತ್ತದೆ.
8. ಅನುಮೋದಿತ ಕಾಮಗಾರಿಗಳನ್ನು ಪಂ.ರಾ.ಇಂ. ಇಲಾಖೆಯ ಮುಖಾಂತರ ಅನುಷ್ಠಾನಗೊಳಿಸಬೇಕು ಹಾಗೂ ಕಾಮಗಾರಿಗಳನ್ನು ಪಾರದರ್ಶಕತೆ ಕಾಯಿದೆ ಪ್ರಕಾರ ಟೆಂಡರ್ ಕರೆದು ನಿರ್ವಹಿಸುವುದು ಹಾಗೂ ಉತ್ತಮ ಗುಣಮಟ್ಟವನ್ನು ಖಾತರಿಪಡಿಸಿಕೊಳ್ಳುವುದು.
9. ಕೆರೆ ಕಾಮಗಾರಿಗಳನ್ನು ಪ್ರಾರಂಭಿಸುವ ಮುನ್ನ ಪ್ರಗತಿಯಲ್ಲಿರುವಾಗ ಮತ್ತು ಮುಕ್ತಾಯದ ನಂತರ ಛಾಯಾ ಚಿತ್ರಗಳನ್ನು ತೆಗೆದು ದಾಖಲಿಸುವುದು ಮತ್ತು ಸದರಿ ವೆಚ್ಚವನ್ನು ಸಂಬಂಧಪಟ್ಟ ಕಾಮಗಾರಿಯ ಅಂದಾಜು ಪಟ್ಟಿಗೆ ಸೇರಿಸಿಕೊಳ್ಳುವುದು.
10. ಜಿಲ್ಲಾ ಪಂಚಾಯತಿಗಳಲ್ಲಿ ಅನುಷ್ಠಾನಗೊಳಿಸುವ ಕೆರೆ ಕಾರ್ಯಕ್ರಮ/ಲೆಕ್ಕ ಶೀರ್ಷಿಕೆಯಡಿಯ ಕಾಮಗಾರಿಗಳ ವಿವರವನ್ನು ಪ್ರತಿ ಹಂತದಲ್ಲಿ ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ (Worksoft Website) ಅಳವಡಿಸಲು ನೀಡಿದ ಸರ್ಕಾರದ ಸುತ್ತೋಲೆ ಸೂಚನೆಯನ್ನು ತಪ್ಪದೆ ಪಾಲಿಸತಕ್ಕದ್ದು.
11. ಕೆರೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಸ್ಥಳದಲ್ಲಿ ಮಾಹಿತಿ ಹಕ್ಕು ನಿಯಮಗಳ ಪ್ರಕಾರ ಸಾರ್ವಜನಿಕರ ಮಾಹಿತಿಗಾಗಿ ಕಾಮಗಾರಿಗಳ ಪೂರ್ಣ ವಿವರಗಳನ್ನು ನಾಮಫಲಕದಲ್ಲಿ ಅಳವಡಿಸಿಕೊಳ್ಳಬೇಕು.
12. ಈ ಕಾರ್ಯಕ್ರಮದಡಿ ಬಿಡುಗಡೆ ಮಾಡುವ ಹಣವನ್ನು ಕಾಮಗಾರಿ ಅನುಸಾರ ಖಜಾನೆಯಿಂದ ಡಿ.ಸಿ ಬಿಲ್ ಮುಖಾಂತರವೇ ಡ್ರಾ ಮಾಡಿ ನೇರವಾಗಿ ಗುತ್ತಿಗೆದಾರರಿಗೆ ಪಾವತಿಸತಕ್ಕದ್ದು.
13. ಈ ಯೋಜನೆಯಡಿ ಬಿಡುಗಡೆ ಮಾಡುವ ಅನುದಾನಕ್ಕೆ ಸಂಬಂಧಿಸಿದಂತೆ ಜಿ.ಪಂ.ನಲ್ಲಿ ಕೈಗೊಂಡ ಕೆರೆ ಕಾಮಗಾರಿಗಳ ವಿವರಗಳನ್ನು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಅಳವಡಿಸಿದ ಬಳಿಕ ಕಾಮಗಾರಿಗಳ ಬಿಲ್ಲುಗಳನ್ನು ಪಾವತಿ ಮಾಡುವುದು ಕಡ್ಡಾಯವಾಗಿರುತ್ತದೆ.
14. ಕಾಮಗಾರಿಗಳ ಗುಣಮಟ್ಟವನ್ನು ಕಾಲಕಾಲಕ್ಕೆ ಇಲಾಖಾ ಮಟ್ಟದಲ್ಲಿ ಪರಿಶೀಲಿಸತಕ್ಕದ್ದು ಹಾಗೂ ಕಾಮಗಾರಿ ಪೂರ್ಣಗೊಂಡ ನಂತರ ಗುಣಮಟ್ಟ ಪರೀಕ್ಷೆಯನ್ನು ಸ್ವಾಯತ್ತ ಸಂಸ್ಥೆಗಳಿಂದ Third Party Inspection ಗೆ ಒಳಪಡಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬೂವನಹಳ್ಳಿ ನಾಗರಾಜ್)
ನಿರ್ದೇಶಕರು
ಸುವರ್ಣ ಗ್ರಾಮೋದಯ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಪ್ರತಿಯನ್ನು:**

1. ಮಹಾಲೇಖಪಾಲರು (ಲೆಕ್ಕಪತ್ರ) ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಆಡಿಟ್-1) ಕರ್ನಾಟಕ, ಬೆಂಗಳೂರು.
3. ಮಹಾಲೇಖಪಾಲರು (ಆಡಿಟ್-2) ಕರ್ನಾಟಕ, ಬೆಂಗಳೂರು.

4. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ, ಬೆಂಗಳೂರು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
8. ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, (ಪಿಎಂಯು) (ಐಎಫ್) 5ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು.
9. ವಿಶೇಷಾಧಿಕಾರಿಗಳು, (ಜಿ.ಪಂ) ಮತ್ತು ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
10. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
11. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
12. ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು.
13. ಉಪ ನಿರ್ದೇಶಕರು, ನೆಟ್ ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್, ಖಜಾನಾ ಇಲಾಖೆ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
14. ಅಧೀನ ಕಾರ್ಯದರ್ಶಿ, ವೆಚ್ಚ-6, ಜಿ.ಪಂ, ಆರ್ಥಿಕ ಇಲಾಖೆ, ಬೆಂಗಳೂರು.
15. ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
16. ಮುಖ್ಯ ಇಂಜನಿಯರ್, ಪಂಚಾಯತ್‌ರಾಜ್ ಇಂಜನಿಯರಿಂಗ್ ಇಲಾಖೆ, ಗ್ರಾಮೀಣಾಭಿವೃದ್ಧಿ ಭವನ, 2ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು.-9.
17. ಎಲ್ಲಾ ಪಂಚಾಯತ್ ರಾಜ್ ಇಂಜನಿಯರಿಂಗ್ ವೃತ್ತಗಳ ಅಧೀಕ್ಷಕ ಅಭಿಯಂತರರು.
18. ಎಲ್ಲಾ ಪಂಚಾಯತ್ ರಾಜ್ ಇಂಜನಿಯರಿಂಗ್ ವಿಭಾಗಗಳ ಕಾರ್ಯಪಾಲಕ ಅಭಿಯಂತರರು.
19. ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.